## ೨೭. ಜೋ ಜೋ ಶ್ರೀಕೃಷ್ಣ (ಲಾಲಿ ಹಾಡು)

ಜೋ ಜೋ ಶ್ರೀಕೃಷ್ಣ ಪರಮಾನಂದ ॥ ಪ ॥
ಜೋ ಜೋ ಗೋಪಿಯು ಕಂದ ಮುಕುಂದ ॥ ಅ. ಪ. ॥

ಪಾಲಗಡಲೊಳು ಪವಡಿಸಿದವನೆ ।
ಆಲದೆಲೆಯ ಮೇಲೆ ಮಲಗಿದ ಶಿಶುವೆ ।
ಶ್ರೀಲತಾಂಗಿಯರ ಚಿತ್ತದೊಲ್ಲಭನೆ ।
ಬಾಲ ನಿನ್ನನು ಪಾಡಿ ತೂಗುವೆನಯ್ಯಾ ॥ ೧ ॥

ಹೊಳೆವಂಥ ರನ್ನದ ತೊಟ್ಟಿಲ ಮೇಲೆ ।
ಥಳ ಥಳಿಸುವ ಗುಲಗಂಜಿಯ ಮಾಲೆ ।
ಅಳುವದ್ಯಾಕೋ ಎನ್ನಯ ಮುದ್ದು ಬಾಲ ।
ನಳಿನನಾಭನೆ ನಿನ್ನ ಪಾಡಿ ತೂಗುವೆನು ॥ ೨ ॥

ಯಾರ ಕಂದ ನೀನಾರ ನಿಧಿ ನೀ ।
ಯಾರ ರನ್ನವೋ ನೀನಾರ ಮಾಣಿಕವೋ ।
ಸೇರಿತು ಎನಗೊಂದು ಚಿಂತಾಮಣಿ ಎಂದು ।
ಪೋರನೆ ನಿನ್ನನು ಪಾಡಿ ತೂಗುವೆನು ॥ ೩ ॥

ಗುಣನಿಧಿಯೇ ನಿನ್ನನ್ನೆತ್ತಿಕೊಂಡಿದ್ದರೆ ।
ಮನೆಯ ಕೆಲಸವಾರು ಮಾಡುವರಯ್ಯ ।
ಮನಕೆ ಸುಖ ನಿದ್ರೆಯ ತಂದುಕೊ ಬೇಗ ।
ಫಣಿಶಯನನೆ ನಿನ್ನ ಪಾಡಿ ತೂಗುವೆನು ॥ ೪ ॥

ಅಂಡಜವಾಹನ ಅನಂತಮಹಿಮ ।
ಪುಂಡರೀಕಾಕ್ಷ ಶ್ರೀ ಪರಮಪಾವನ್ನ ।
ಹಿಂಡು ದೈವದಗಂಡ ಉದ್ದಂಡನೇ ।
ಪಾಂಡುರಂಗ ಶ್ರೀ ಪುರಂದರ ವಿಠಲ ॥ ೫ ॥